**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.104/2019

ಸಾಕ್ಷಿಯನ್ನು ದಿಃ **07.03.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರಃ ಶ್ರೀ ವಿ ಆರ್ ವಕೀಲರಿಂದ:**

ನಾನು ಈಗ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆ ತಾಯಿ ಈಗ ಬದುಕಿಲ್ಲ. ನನ್ನ ಮದುವೆ 1993 ರಜನವರಿ 24 ಮತ್ತು 25 ನೇ ತಾರೀಖಿನಂದು ನಡೆಯಿತು. ನನ್ನ ಗಂಡನ ಹೆಸರು ಸೂರ್ಯೋದಯ ಸಿಂಧ್ಯ. ವಾದಪತ್ರದಲ್ಲಿ ನನ್ನ ಗಂಡನ ಹೆಸರನ್ನು ಹಾಕಿಲ್ಲ ಸಾಕ್ಷಿ ಮುಂದುವರೆದು ನಾನು ವಿವಾಹ ವಿಚ್ಛೇದನೆ ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. 2000 ರಲ್ಲಿ ವಿವಾಹ ವಿಚ್ಛೇದನೆ ಆಗಿದೆ. ನಾನು ವಿವಾಹ ವಿಚ್ಛೇದನೆ ಪಡೆದು ಕೊಂಡ ನಂತರ ನಾನು ಮತ್ತು ನನ್ನ ಮಗಳು ನನ್ನ ತಂದೆಯೊಂದಿಗೆ ವಾಸ ಮಾಡುತ್ತಿದ್ದೆವು. ನಾನು ಹೆರಿಗೆಂದು 1994 ರಲ್ಲಿ ತವರು ಮನೆಗೆ ಬಂದಿದ್ದು ಆಗಿನಿಂದಲೂ ತಂದೆಯೊಂದಿಗೆ ವಾಸ ಮಾಡುತ್ತಿದ್ದೇನೆ. 1ನೇ ವಾದಿ ನನ್ನ ಅಕ್ಕ. ಅವರ ಮದುವೆ 1991 ರಲ್ಲಿ ಆಗಿದೆ. ಅವರ ಗಂಡನ ಹೆಸರು ಅಮೀರ್ ಅಲಿ. ಅವರ ಮದುವೆಯನ್ನು ತಂದೆ ಮಾಡಿಲ್ಲ. ಪ್ರೀತಿಸಿ ಮದುವೆಯಾಗಿದ್ದಾರೆ. 1ನೇವಾದಿ ಮದುವೆ ಯಾದ ನಂತರ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಎರಡು ಧರ್ಮದ ಹಬ್ಬಗಳನ್ನು ಆಚರಿಸುತ್ತಾರೆ ಎಂದು ನುಡಿಯುತ್ತಾರೆ.

1ನೇ ವಾದಿ ಈಗ ಬೆಂಗಳೂರಿನಲ್ಲಿ ವಾಸ ಇದ್ದಾರೆ. ನಮ್ಮಿಬ್ಬರ ಮನೆ ಅಕ್ಕಪಕ್ಕದಲ್ಲಿದೆ. 1ನೇ ವಾದಿ ಇಸ್ಲಾಂ ಧರ್ಮಕ್ಕೆ ಅನುಗುಣವಾಗಿ ಜೀವನ ಶೈಲಿ ನಡೆಸುತ್ತಿದ್ದಾರೆಯೇ ಎಂದರೆ ಇಲ್ಲ. ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರು ಅನ್ಯ ಧರ್ಮದ ಆಚರಣೆಗಳನ್ನು ಪಾಲಿಸುವುದಿಲ್ಲ ಎಂದು ನಿಮಗೆ ಗೊತ್ತಿದೆಯೇ ಎಂದರೆ ಇಲ್ಲ. 1ನೇ ವಾದಿಯ ಹೆಸರು ಅನಿತಾ ಚೌವಾಣ್ ಅಲ್ಲ , ಆಯಿಷಾ ಎಂದರೆ ಅದು ಅವರ ಗಂಡ ಅವರನ್ನು ಕರೆಯುವ ಹೆಸರಾಗಿದೆ ನಾವೆಲ್ಲರೂ ಅನಿತಾ ಚೌವಾಣ್ ಎಂದು ಕರೆಯುತ್ತೇವೆ. 1ನೇ ವಾದಿಯ ಹೆಸರು ಆಯಿಷಾ ಅಲಿ ಕೋಂ ಅಮೀರ್ ಅಲಿ ಎಂದು ಎಲ್ಲಾ ದಾಖಲೆಗಳಲ್ಲಿ ಬಂದಿರುವ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಗೊತ್ತಿಲ್ಲ. 1ನೇ

ವಾದಿ ಇಸ್ಲಾಂ ಧರ್ಮಕ್ಕೆ ಮತಾಂತರ ಗೊಂಡಿರುವ ಕಾರಣ ಈ ದಾವೆಯನ್ನು ಸಲ್ಲಿಸಲು ಕಾನೂನಿನ ಅಡಿಯಲ್ಲಿ ಅವರಿಗೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಂದೆ ತಾಯಿ ಬದಲಾಗುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಅಸೇಸ್ ಮೆಂಟ್ ಸಂಖ್ಯೆ 35771 ರ ಮನೆ ನಂ. 3577/1 ಆಗಿದೆ. ವಾದಪತ್ರದಲ್ಲಿ ಅಸೇಸ್ ಮೆಂಟ್ ಸಂಖ್ಯೆಗೂ ನಾನು ಹೇಳಿದ ಸಂಖ್ಯೆಗೂ ತಾಳೇ ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 45 *100 ಅಡಿ ಇದೆ. ಸದರಿ ಸ್ವತ್ತು ನನ್ನ ತಂದೆಗೆ ನನ್ನ ಅಜ್ಜ ಅಜ್ಜಿ ಇದ್ದಾಗ ತೆಗೆದುಕೊಟ್ಟಿದ್ದಾರೆ. ನನ್ನ ಅಜ್ಜ ಅಜ್ಜಿ ಖಾಲಿ ನಿವೇಶನವನ್ನು ನಮ್ಮ ಮನೆಯ ಹಿಂದೆ ಇದ್ದ ಹಬೀಬ್ ಎಂಬುವವರಿಂದ ಖರೀದಿಸಿದ್ದು. ಮನೆಯನ್ನು ನನ್ನ ತಂದೆ ಕಟ್ಟಿಸಿದ್ದಾರೆ. ಹಬೀಬ್ ರವರಿಂದ ನನ್ನ ಅಜ್ಜ ಅಜ್ಜಿ ಖರೀದಿಸಿದ್ದಾರೆ ಎಂದು ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ. 1976 ರಲ್ಲಿ ನಿವೇಶನ ಖರೀದಿಸಿ 1977 ರಲ್ಲಿ ಮನೆ ಕಟ್ಟಲಾಗಿದೆ. 1976 ರಲ್ಲಿ ನನಗೆ ಸುಮಾರು 7-8 ವರ್ಷ ವಯಸ್ಸಾಗಿರಬಹುದು. ಸದರಿ ಕ್ರಯಪತ್ರವನ್ನು ನಾನು ಖುದ್ದಾಗಿ ನೋಡಿಲ್ಲ. ಆದರೆ ತಂದೆ ತಾಯಿ ಮತ್ತು ಅಜ್ಜ ಅಜ್ಜಿ ಮಾತನಾಡುವುದನ್ನು ಕೇಳಿದ್ದೇನೆ. ಎಷ್ಟು ಹಣಕ್ಕೆ ನಿವೇಶನ ಖರೀದಿಸಿದ್ದಾರೆ ಎಂದು ಗೊತ್ತಿಲ್ಲ. ನಾನು ಅಪ್ರಾಪ್ತಯಾಗಿದ್ದ ಕಾರಣ ಖರೀದಿಗೆ ಸಂಬಂಧಪಟ್ಟ ಯಾವುದೇ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಅಪ್ರಾಪ್ತೆಯಾಗಿದ್ದ ಕಾರಣ ಸದರಿ ನಿವೇಶನ ಸ್ವಯಾರ್ಜಿತವೇ ಪಿತ್ರಾರ್ಜಿತವೇ ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಆಗ ಗೊತ್ತಿರಲಿಲ್ಲ ಈಗ ಗೊತ್ತಿದೆ. 1976 ರಲ್ಲಿ ನಿವೇಶನ ಖರೀದಿಸಿದ ನಂತರ ಕಟ್ಟಣ ನಿರ್ಮಾಣ ಮಾಡಲು ನನ್ನ ತಂದೆ ಎಷ್ಟು ಹಣ ಖರ್ಚು ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ತಂದೆ 45*20 ಅಡಿಯ ವಿಸ್ತೀರ್ಣದ ಮನೆಯನ್ನು ಕಟ್ಟಿಸಿದರು. ನನ್ನ ತಂದೆ ಹುಣಸೂರು ನಗರದಲ್ಲಿ ಪ್ರಖ್ಯಾತ ವಕೀಲರಾಗಿದ್ದರು ಎಂದರೆ ಸರಿ. ನನ್ನ ತಂದೆ ವಕೀಲ ವೃತ್ತಿಯಿಂದ ಸಂಪಾದಿಸಿದ ಹಣದಿಂದ ಮನೆ ನಿರ್ಮಿಸಿದರು ಎಂದರೆ ಹೆಚ್ಚಿನ ಪಾಲು ತಂದೆಯ ಹಣವಾಗಿದ್ದು ಸ್ವಲ್ಪ ನನ್ನ ಅಜ್ಜ ಅಜ್ಜಿ ಕೊಟ್ಟಿದ್ದಾರೆ. ನಿಮಗೆ ಅಜ್ಜ ಅಜ್ಜಿ ಹಣ ಕೊಟ್ಟ ಬಗ್ಗೆ ಖುದ್ದಾಗಿ ಗೊತ್ತಿದೆಯೇ ಎಂದರೆ ನನ್ನ ಕಣ್ಣ ಮುಂದೆ ಕೊಟ್ಟಿದ್ದಾರೆ. ನನ್ನ ಅಜ್ಜ ಅಜ್ಜಿಗೆ ಸೋಮನಹಳ್ಳಿಯಲ್ಲಿ ತೋಟ ಮತ್ತು ಹೊಲ ಇತ್ತು ಹಾಗೂ ಉದ್ದೂರು ನಾಲೆಯಲ್ಲಿ ಗದ್ದೆ ಇತ್ತು ಅದರಿಂದ ವರಮಾನ ಇತ್ತು.

ನನ್ನ ಅಜ್ಜ ಅಜ್ಜಿಗೆ 9 ಜನ ಮಕ್ಕಳು, 6 ಹೆಣ್ಣು 3 ಗಂಡು. ಅಜ್ಜ ಅಜ್ಜಿಗೆ ಇದ್ದ ಜಮೀನುಗಳ ಸರ್ವೆ ನಂ. ನನಗೆ ಗೊತ್ತಿಲ್ಲ. ಅಜ್ಜ ಅಜ್ಜಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ನನಗೆ ಗೊತ್ತಿದೆ. 8 ಎಕರೆ ಹೊಲ , ತೋಟ ಎಷ್ಟು ಎಂದು ಗೊತ್ತಿಲ್ಲ. 12 ಎಕರೆ ಗದ್ದೆ ಇತ್ತು. ಕಿರಿಸೊಡ್ಲು ಗ್ರಾಮದಲ್ಲಿದ್ದ 15-20 ಎಕರೆ ಜಮೀನು ಭೂ ನ್ಯಾಯಾ ಮಂಡಳಿಯಿಂದ ರೈತರಿಗೆ ಹೋಗಿದೆ. ಕರ್ನಾಟಕ ಭೂ ಸುಧಾರಣೆ ಕಾಯಿದೆ 1974 ರಲ್ಲಿ ಜಾರಿಗೆ ಬಂತು ಎಂದರೆ ಈಗ ಗೊತ್ತಾಯಿತು. ರೈತರು ಅನುಭೋಗದಾರರೆಂದು ಘೋಷಣೆ ಮಾಡುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ ಕಾರಣ ಆ ಜಮೀನುಗಳು ರೈತರ ಪಾಲಾಯಿತು. ನನ್ನ ಅಜ್ಜ ಅಜ್ಜಿಗೆ ಉದ್ದೂರು ನಾಲೆ ಗ್ರಾಮದ ಪೂರ್ತಿ 12 ಎಕರೆ ಉಳಿಯಿತು. ನನ್ನ ಅಜ್ಜ ಅಜ್ಜಿ ತಮ್ಮ 9 ಜನ ಮಕ್ಕಳ ಮದುವೆ ಮಾಡುವ ಸಲುವಾಗಿ ಜಮೀನುಗಳನ್ನು ಕಳೆದುಕೊಂಡರು ಎಂದರೆ ಸರಿಯಲ್ಲ. ನಾನು ಚಿಕ್ಕವಳಿದ್ದಾಗಲೇ ಅವರೆಲ್ಲರ ಮದುವೆಯಾಗಿತ್ತು. ನಾನು ಅಪ್ರಾಪ್ತೆಯಾಗಿದ್ದ ಕಾರಣ ನನ್ನ ಅಜ್ಜ ಅಜ್ಜಿಗೆ ಜಮೀನುಗಳಿಂದ ಎಷ್ಟು ವರಮಾನ ಇತ್ತು ಎಂದು ಗೊತ್ತಿಲ್ಲ. ಆ ಕಾರಣದಿಂದ 1976 ರಲ್ಲಿ ಜಮೀನು ಖರೀದಿಸಲು ನನ್ನ ಅಜ್ಜ ಅಜ್ಜಿ ಎಷ್ಟು ಹಣ ಕೊಟ್ಟರು ಎಂದು ನನಗೆ ಖುದ್ದಾಗಿ ಗೊತ್ತಿಲ್ಲ. ನನ್ನ ತಂದೆ ತಮ್ಮ ವಕೀಲ ವೃತ್ತಿಯ ಸಂಪಾದನೆಯಿಂದ ನಿವೇಶನವನ್ನು ಖರೀದಿಸಿ ಮನೆ ಕಟ್ಟಿದ್ದಾರೆ ಎಂದರೆ ಅಜ್ಜ ಅಜ್ಜಿ ಸಹಾಯ ಮಾಡಿದ್ದಾರೆ. ದಾವಾ ಸ್ವತ್ತು ಅವಿಭಕ್ತ ಕುಟುಂಬದ ಸ್ವತ್ತಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದು ಇಬ್ಬರೂ ಚಿಕ್ಕಪ್ಪಂದಿರಿಗೆ ಸರ್ಕಾರಿ ಕಾಲೇಜಿನ ಹತ್ತಿರ ಸೈಟ್ ಕೊಟ್ಟಿದ್ದು ನನ್ನ ತಂದೆಗೆ ಹಣ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ವಾದಪತ್ರದಲ್ಲಿ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಪಿತ್ರಾರ್ಜಿತ ಎಂದು ಸೇರಿಸಿದ್ದೇವೆ. ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ.

ನನ್ನ ಅಜ್ಜ ಅಜ್ಜಿ ಎಷ್ಟು ಆಸ್ತಿಗಳನ್ನು ಹೊಂದಿದ್ದರು ಎಂಬ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಅಜ್ಜ ಅಜ್ಜಿ ಯಾವ ಮಕ್ಕಳಿಗೆ ಎಷ್ಟು ಆಸ್ತಿ ಕೊಟ್ಟಿದ್ದಾರೆ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಅಜ್ಜ ಅಜ್ಜಿಗೆ ಮತ್ತು ಚಿಕ್ಕಪ್ಪಂದಿರಿಗೆ ಯಾವೆಲ್ಲಾ ಆಸ್ತಿಗಳು ಇದ್ದವು ಎಂದು ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಅದರ ಅವಶ್ಯಕತೆ ಇರಲಿಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತು ಮಾತ್ರ ಇದೆ ಎಂದರೆ ಸರಿಯಲ್ಲ ಎ ಷೆಡ್ಯೂಲ್ ಆಸ್ತಿ

ಹಳೇ ಮನೆಯಾಗಿದ್ದು ಬಿ ಷೆಡ್ಯೂಲ್ ನಂತರ ಕಟ್ಟಿದ ಕಟ್ಟಡವಾಗಿದೆ. ನಾನು ತಿದ್ದುಪಡಿ ವಾದಪತ್ರದಲ್ಲಿ ದಾವಾ ಬಿ ಷೆಡ್ಯೂಲ್ ಸ್ವತ್ತಿನ ಅಸೆಸ್ ಮೇಂಟ್ ಮತ್ತು ಡೋರ್ ನಂ. ನಮೂದಿಸಿಲ್ಲ ಎಂದರೆ ಪಟ್ಟಣ ವ್ಯಾಪ್ತಿಯಲ್ಲಿ ಒಂದು ಆಸ್ತಿಗೆ ಒಂದು ಸಂಖ್ಯೆಯನ್ನು ನೀಡಿ ನಂತರ ಅದಕ್ಕೆ ಕಟ್ಟಡಗಳನ್ನು ನಿರ್ಮಿಸಿದರೆ ಬೇರೆ ಅಸೆಸ್ ಮೇಂಟ್ ಸಂಖ್ಯೆ ಕೊಡುವುದಿಲ್ಲ ಒಂದೇ ಸಂಖ್ಯೆ ಮುಂದುವರಿಯುತ್ತದೆ. ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತಿಗೆ ಕೊಟ್ಟಂತಹ ಚೆಕ್ಕು ಬಂದಿ ಒಂದೇ ಆಗಿದೆ ಎಂದರೆ ಸರಿ. ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳ ವಿಸ್ತೀರ್ಣವನ್ನು ವಾದಪತ್ರದಲ್ಲಿ ಒಂದೇ ತೋರಿಸಲಾಗಿದೆ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.